ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ ಶ್ರೀರಂಗಪಟ್ಟಣ

ಸಿಸಿ 37/2017 ಸಿಡಬ್ಲ್ಯೂ : 7 ಪಿ ಡಬ್ಲ್ಯೂ : 6

| | |
|---|---|
| ಹೆಸರು | ರಾಮು |
| ತಂದೆಯ ಹೆಸರು | ರಮೇಶ್ |
| ವಯಸ್ಸು | 35 ವರ್ಷ |
| ವೃತ್ತಿ | ಚಾಲಕ |
| ವಾಸ | ಬ್ರಹ್ಮಪುರ ಗ್ರಾಮ |

ದಿನಾಂಕಃ 05.08.2024 ರಂದು ಸಾಕ್ಷಿಗೆ ಪ್ರಮಾಣ ವಚನ ನೀಡಲಾಯಿತು.

<u>ಮುಖ್ಯ ವಿಚಾರಣೆ ಎ ಪಿ ಪಿ ರವರಿಂದಃ</u>

1. ಚಾಸಾ 1 ರಿಂದ 6 ಮತ್ತು 8 ರಿಂದ 11 ರವರ ಪರಿಚಯವಿದೆ. ಆರೋಪಿತರ ಪರಿಚಯವಿದೆ. ನನಗೆ ಈ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇಲ್ಲ. ಸುಮಾರು 4-5 ವರ್ಷದ ಹಿಂದೆ ನಾನು ಕೆಲಸಕ್ಕೆ ಹೋಗಿದ್ದು, ವಾಪಸ್ ಬಂದಾಗ ಪೊಲೀಸರು ಊರಿನಲ್ಲಿ ಯಾರೋ ಗಲಾಟೆ ಮಾಡಿಕೊಂಡಿದ್ದಾರೆ ಎಂದು ಹೇಳಿ ನನ್ನ ಸಹಿಯನ್ನು ಪಡೆದಿರುತ್ತಾರೆ. ಯಾರ ನಡುವೆ ಗಲಾಟೆಯಾಗಿರುತ್ತದೆ ಎಂದು ನನಗೆ ಗೊತ್ತಿಲ್ಲ ಹಾಗೂ ನಾನು ಯಾವುದೇ ಗಲಾಟೆಯನ್ನು ನೋಡಿಲ್ಲ. ನಾನು ಪೊಲೀಸರಿಗೆ ಯಾವುದೇ ಹೇಳಿಕೆ ನೀಡಿಲ್ಲ.

<u>ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಎ ಪಿ ಪಿರವರು ಅನುಮತಿ ಕೋರುತ್ತಿದ್ದು , ಸಾಕ್ಷಿಯ ಸಾಕ್ಷ್ಯವನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು.</u>

<u>ಪಾಟೀ ಸವಾಲು : ಎ ಪಿ ಪಿ ರವರಿಂದಃ</u>

2. ದಿಃ 29.03.2017 ರ ಸಂಜೆ 5.30 ಗಂಟೆಗೆ ನಾನು ಮತ್ತು ಗ್ರಾಮಸದ್ದರು ಅರಳಿಕಟೆ ಬಳಿ ಇದ್ದಾಗ ಚಾಸಾ 1 ರವರು ಅಲ್ಲಿಗೆ ಬಂದಿದ್ದು, ಅದೇ ಸಮಯಕ್ಕೆ 1 ನೇ ಆರೋಪಿಯು ಸಹ ಬಂದಿದ್ದು, ಚಾಸಾ 1 ರವರು ತನಗೆ ಬರಬೇಕಾದ ಹಣವನ್ನು ಕೇಳಿ ಏಕಾಏಕಿ ಜಗಳ

ಮಾಡುತ್ತಿದ್ದಾಗ ಚಾಸಾ 1 ರವರ ಮನೆಯವರು ಸ್ಥಳಕ್ಕೆ ಬಂದರು ಎಂದರೆ ಸರಿಯಲ್ಲ. ಆಗ 1 ನೇ ಆರೋಪಿಯ ರಸ್ತೆಯಲ್ಲಿ ಬಿದ್ದಿದ್ದ ದೊಣ್ಣೆಯನ್ನು ತೆಗೆದುಕೊಂಡು ಚಾಸಾ 1 ರವರ ಎಡ ತಲೆ, ಬಲ ಭುಜ, ಬೆನ್ನು ಮತ್ತು ಎಡತೊಡೆಗೆ ಹೊಡೆದು ನೋವುಂಟು ಮಾಡಿದ್ದು, ಚಾಸಾ 1 ರವರು ಕೂಗಿಕೊಂಡಾಗ ಚಾಸಾ 5 ರವರು ಮತ್ತು ಇತರರನ್ನು ಆರೋಪಿತರು ಜಗಳ ಮಾಡಿ 1 ನೇ ಆರೋಪಿಯು ದೊಣ್ಣೆಯಿಂದ ಚಾಸಾ 5 ರವರ ಬಲತಲೆಗೆ ಹೊಡೆದು ರಕ್ತ ಗಾಯ ಮಾಡಿದನು ಎಂದರೆ ಸರಿಯಲ್ಲ.

3. 2 ನೇ ಆರೋಪಿಯು ಚಾಸಾ 5 ರವರು ಮೈಕೈಗೆಲ್ಲಾ ಗುದ್ದಿ, ನೋವುಂಟು ಮಾಡಿ ಅಲ್ಲೇ ಬಿದ್ದಿದ್ದ ರಿಪೀಸ್ ಪಟ್ಟಿಯನ್ನು ತೆಗೆದುಕೊಂಡು ಚಾಸಾ 6 ರವರ ಮೈ ಕೈ ಮೇಲೆ ಹೊಡೆದು ಸಾರ್ವಜನಿಕವಾಗಿ ಅವಮಾನ ಪಡಿಸಿ, ನೋವುಂಟು ಮಾಡಿದನು ಎಂದರೆ ಸರಿಯಲ್ಲ. 1 ಆರೋಪಿಯು 2 ನೇ ಆರೋಪಿಯ ಕೈಯಲ್ಲಿದ್ದ ರಿಪೀಸ್ ಪಟ್ಟಿಯನ್ನು ಕಿತ್ತುಕೊಂಡು ಚಾಸಾ6 ರವರ ಮೈ ಮೇಲೆ ಹೊಡೆದು ಸಾರ್ವಜನಿಕರ ರಸ್ತೆಯಲ್ಲಿ ಅವಮಾನಗೊಳಿಸಿದನು ಎಂದರೆ ಸರಿಯಲ್ಲ. ನಂತರ 1 ನೇ ಹಾಗೂ 2 ನೇ ಆರೋಪಿಯು ತಮ್ಮ ಕೈಯಲ್ಲಿದ್ದ ರಿಪೀಸ್ ಪಟ್ಟಿಯಿಂದ ಚಸಾ 4 ರವರ ಮೈ ಕೈ ಮೇಲೆಲ್ಲಾ ಹೊಡೆದು ಸಾರ್ವಜನಿಕವಾಗಿ ಕಾಲಿನಿಂದ ತುಳಿದು ಅವಮಾನಗೊಳಿಸಿ ನೋವುಂಟು ಮಾಡಿದರು ಎಂದರೆ ಸರಿಯಲ್ಲ . 3 ರಿಂದ 5 ನೇ ಆರೋಪಿತರು ಚಸಾ 2 ರವರಿದೊಂದಿಗೆ ಜಗಳ ತೆಗೆದು ಸಾರ್ವಜನಿಕ ರಸ್ತೆಯಲ್ಲಿ ಕೈಯಿಂದ ಹೊಡೆದು ನೋವುಂಟು ಮಾಡಿದರು ಎಂದರೆ ಸರಿಯಲ್ಲ. 3 ಮತ್ತು 4 ನೇ ಆರೋಪಿಯು ಚಾಸಾ 3 ರವರನ್ನು ಕುರಿತು ನಿನ್ನ ಭಾವನ ಪರವಾಗಿ ಬಂದಿದ್ದೀಯಾ ಎಂದು ಜಗಳ ತೆಗೆದು ಆತನು ಹಾಕಿಕೊಂಡಿದ್ದ ಶರ್ಟನ್ನು ಹರಿದು ಹಾಕಿ ಕೈಯಿಂದ ಆತನ ಮೈ ಮೈ ಮೇಲೆಲ್ಲಾ ಗುದ್ದಿ ಕಾಲುಗಳಿಂದು ಒದ್ದು, ನೋವುಂಟು ಮಾಡಿದರು ಎಂದರೆ ಸರಿಯಲ್ಲ. ಚಾಸಾ 1 ಮತ್ತು ಇತರರು ನೋವು

ತಡೆಯಲಾರದೆ ಕಿರುಚಿದಾಗ ಚಾಸಾ 8 ಮತ್ತು 9 ಜಗಳವನ್ನು ಬಿಡಿಸಿ ಸಮಾಧಾನ ಮಾಡಿದೆವು ಎಂದರೆ ಸರಿಯಲ್ಲ. 1 ಹಾಗೂ 2 ನೇ ಆರೋಪಿಯು ತಮ್ಮ ಕೈಯಲ್ಲಿದ್ದ ರಿಪೀಸ್ ಪಟ್ಟಿ ಮತ್ತು ದೊಣ್ಣೆಯನ್ನು ಅಲ್ಲೇ ಬಿಸಾಡಿ ಹೋದರು ಎಂದರೆ ಸರಿಯಲ್ಲ. ಅದನ್ನು ಚಾಸಾ 3 ರವರು ಎತ್ತಿಟ್ಟುಕೊಂಡರು ಎಂದರೆ ಸರಿಯಲ್ಲ. ಚಾಸಾ 1 ಮತ್ತು ಇತರರಿಗೆ ಹಲ್ಲೆ ಮಾಡಿರುವ ಆರೋಪಿತರು ಅವರುಗಳಿಗೆ ಹೊಡೆಯಲು ಉಪಯೋಗಿಸಿದ ದೊಣ್ಣೆ , ರಿಪೀಸ್ ಪಟ್ಟಿ ಹಾಗೂ ಚಾಸಾ 3 ರವರ ಹರಿದ ಶರ್ಟನ್ನು ನಾನು ನೋಡಿದರೆ ಗುರುತಿಸಿಸುತ್ತೇನೆ ಎಂದರೆ ಸರಿಯಲ್ಲ. ನ್ಯಾಯಾಲಯದ ಮುಂದೆ ಹಾಜರುಪಡಿಸಲಾದ ಎಂ ಒ 1 ರಿಂದ 3 ಗಳನ್ನು ಸಾಕ್ಷಿ ಗುರುತಿಸಿರುವುದಿಲ್ಲ. ಆರೋಪಿತರ ಪರಿಚಯವಿದ್ದು, ಅವರಿಗೆ ಸಹಾಯ ಮಾಡಲು ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

4. "ನಾನು ಮೇಲ್ಕಂಡ ವಿಳಾಸದಲ್ಲಿ …..........................................ಮತ್ತೆ ನೋಡಿದರೆ ಗುರುತಿಸುತ್ತೇನೆ". ಈಗ ಓದಿ ಹೇಳಿದ ರೀತಿ ನಾನು ಪೊಲೀಸರಿಗೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯ ಭಾಗವನ್ನು ನಿಪಿ 4 ಎಂದು ಗುರುತಿಸಲಾಗಿದೆ.

<u>ಪಾಟೀ ಸವಾಲು ಃ ಆರೋಪಿತರ ಪರ ವಕೀಲರಿಂದಃ</u>

ವಕೀಲರು ಹಾಜರಿದ್ದು ಪಾಟೀ ಸವಾಲು ಇಲ್ಲ ಎಂದು ಹೇಳಿರುತ್ತಾರೆ.

ಮರು ವಿಚಾರಣೆ ಇಲ್ಲ.

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.

ಓ ಹೇ ಕೆ ಸ ಇ ಓ

ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು

ಶ್ರೀರಂಗಪಟ್ಟಣ.